ಎನ್.ಜಿ.ಇ.ಎಫ್. ಸಂಸ್ಥೆಯ ಷೇರು ಮಾರಾಟ ವಿಚಾರ

ಳಖಖ. ಶ್ರೀ ಜಿ. ಎಸ್. ಆಚಾರ್ (ಬೈಂದೂರು)—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಎನ್.ಜಿ.ಇ.ಎಫ್. ಸಂಸ್ಥೆಯ ಎಷ್ಟು ಷೇರುಗಳನ್ನು ಎಇಜಿ ಕಂಪನಿಗೆ ಮಾರಾಟ ಮಾಡಲಾಗಿದೆ ?

ಆ) ಮಾರಾಟಕ್ಕೆ ಕಾರಣವೇನು ?

ಇ) ಭಾರತೀಯ ಜೀವವಿಮಾ ನಿಗಮ ಮತ್ತು ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ ಅವರಿ ಷೇರು ಖರೀದಿಸಲು ಬೇಡಿಕೆ ಸಲ್ಲಿಸಿದ್ದರೂ ಅದನ್ನು ತಿರಸ್ಕರಿಸಲು ಕಾರಣವೇನು ?

ಶ್ರೀ ಜೆ. ಹೆಚ್. ಪಟೀಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೧ ಲಕ್ಷ ಹಕ್ಕಿನ ಷೇರುಗಳು.

ಆ) ರಾಜ್ಯ ಸರ್ಕಾರವು ಬೃಹತ್ ಕೈಗಾರಿಕೆಗಳಲ್ಲಿ ಇನ್ನು ಹೂಂದೆ ಹೆಚ್ಚಿನ ಷೇರು ಬಂಡವಾಳ ವನ್ನು ತೊಡಗಿಸದಿರಲು ನಿರ್ಧಾರ ತೆಗೆದುಕೊಂಡಿರುತ್ತೆ. ಸದರಿ ನಿರ್ಧಾರದನ್ವಯ ರಾಜ್ಯ ಸರ್ಕಾರವು ತನ್ನ ಪಾಲಿನ ೮೬,೮೦೦ ಹಕ್ಕಿನ ಷೇರುಗಳನ್ನು ಎಇಜಿ ಪರವಾಗಿ ತ್ಯಾಗ ಮಾಡಿದೆ.

ಇ) ಷೇರುಗಳ ಖರೀದಿಗಾಗಿ ಭಾರತೀಯ ಜೀವವಿಮಾ ನಿಗಮ ಯಾವುದೇ ಪ್ರಸ್ತಾಪ ಮಾಡಿಲ್ಲ. ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ ಷೇರುಗಳನ್ನು ಖರೀದಿಸಲು ಪ್ರಸ್ತಾಪಿಸಿದ್ದು ಅದನ್ನು ಪರಿಶೀಲಿಸಲಾಗುತ್ತಿದೆ.

ಗಣಿ ಹಕ್ಕಿನ ತೆರಿಗೆಯನ್ನು ಮಂಡಲ್ ಪಂಚಾಯಿತಿಗಳಿಗೆ ವಹಿಸುವ ಬಗ್ಗೆ

ಳಗಗ. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಜಿಲ್ಲಾ ಪರಿಷತ್ತಿನ ಕಾಯ್ದೆಯ ಪ್ರಕಾರ ಗಣಿ ಹಕ್ಕಿನ ತೆರಿಗೆಯನ್ನು ಪಡೆಯಲು ಮಂಡಲ್ ಪಂಚಾಯಿತಿಗಳಿಗೆ ಅವಕಾಶವಿರುವುದು ನಿಜವೇ ?

೨) ರಾಜ್ಯ ಸರ್ಕಾರವು ಈಗಾಗಲೇ ಗಣಿ ಮಾಲೀಕರಿಂದ ರಾಜಧನವನ್ನು ವಸೂಲಿ ಮಾಡುತ್ತಿದು ಗಣಿ ಹಕ್ಕಿನ ತೆರಿಗೆಯನ್ನು ವಸೂಲಿ ಮಾಡಲು ಮಂಡಲ್ ಪಂಚಾಯತ್‌ಗಳಿಗೆ ಬಿಟ್ಟು ಕೊಡಲಾಗುವುದೇ ಅಥವಾ ಸರ್ಕಾರವೇ ತೆರಿಗೆಯನ್ನು ಪಡೆಯುವುದೇ ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು).—

೧) ಹೌದು

೨) ಗಣಿ ಹಕ್ಕಿನ ತೆರಿಗೆಯನ್ನು ವಸೂಲಿ ಮಾಡುವ ಹಕ್ಕು ಗಣಿ ಇಲಾಖೆಯ ವ್ಯಾಪ್ತಿಗೆ ಸೇರಿದ್ದು ಇದನ್ನು ಮಂಡಲ್ ಪಂಚಾಯಿತಿಗೆ ಕೊಡುವ ಪ್ರಶ್ನೆ ಬರುವುದಿಲ್ಲ.

ಹೊಳೆಯಿಂದ ಮರಳು ತೆಗೆಯುವ ವಿಚಾರ

ಳಖ೦. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಹಾಲಾಡಿಯ ಹೊಳೆಯಿಂದ ಅನಿರ್ಬಂಧಿತವಾಗಿ ಮರಳು (ಹೊಯಿಗೆ) ತೆಗೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,